ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ**
**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003**

**ಕಶಾಪ&ಮೌನಿಮಂ/ಮೌಮಾವಿ3/ಮೌಮಾನೊ/1/2025-26** **ದಿನಾಂಕ: 28-11-2025**

## - :ಸು ತ್ತೋ ಲೆ: -

**ವಿಷಯ:** **2026ರ ದ್ವಿತೀಯ ಪಿಯುಸಿ ಎಲ್ಲಾ ಪರೀಕ್ಷಾ ಕಾರ್ಯಗಳಿಗೆ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು/ ಉಪನ್ಯಾಸಕರನ್ನು ಮಂಡಲಿಯ ಜಾಲತಾಣದ PU EXAM PORTAL ನಲ್ಲಿ ನೋಂದಣಿ ಮಾಡುವ ಬಗ್ಗೆ.**

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2026 ರ ದ್ವಿತೀಯ ಪಿ.ಯು.ಸಿ ಪ್ರಾಯೋಗಿಕ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ** ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಎಲ್ಲಾ ಉಪನ್ಯಾಸಕರುಗಳ (ಖಾಯಂ, ಅತಿಥಿ ಹಾಗೂ ಅರೆಕಾಲಿಕ ಉಪನ್ಯಾಸಕರು) ಮಾಹಿತಿಯೊಂದಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣ **PU EXAM PORTAL** ನಲ್ಲಿ ಕಡ್ಡಾಯವಾಗಿ **ದಿನಾಂಕ 31.12.2025 ರೊಳಗೆ** ನೋಂದಾಯಿಸಲು, ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸಿದೆ.

**ಸದರಿ ಮಾಹಿತಿಯನ್ನು ನಮೂದಿಸಲು ಪ್ರಾಂಶುಪಾಲರು ಪಾಲಿಸಬೇಕಾದ ಕ್ರಮಗಳ ವಿವರ ಕೆಳಗಿನಂತಿದೆ.**

1. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣದ **PU EXAM PORTAL** ನ **2026 II PU EXAM -1** ಎಂಬ ಮೆನುವಿನಲ್ಲಿ **EVALUATORS DETAILS ಅನ್ನು ಕಳೆದ ವರ್ಷದ EVALUATORS** ಗಳನ್ನು **Update ಮಾಡಲು** ಅಥವಾ ಹೊಸ **Evaluators** ಗಳನ್ನು ಸೇರಿಸಲು, "**ADD EVALUATOR**" ಎಂಬ ಮೆನುವನ್ನು ಆಯ್ಕೆ ಮಾಡಿಕೊಳ್ಳುವುದು. ನಂತರ ಅಲ್ಲಿ ಬರುವ CONSENT FORM ಅನ್ನು ಓದಿಕೊಂಡು ತಮ್ಮ ಸಮ್ಮತಿಯನ್ನು "**ಹೌದು**" ಎಂದು CLICK ಮಾಡಿ ನಂತರ "**I AGREE**" ಮತ್ತು "**START EKYC**" ಅನ್ನು CLICK ಮಾಡಬೇಕು. ಮುಂದಿನ WEBPAGE ನಲ್ಲಿ ನೋಂದಣಿ ಮಾಡುವ ಪ್ರಾಂಶುಪಾಲರ/ಉಪನ್ಯಾಸಕರ "**ಆಧಾರ್ ಸಂಖ್ಯೆ**" ಯನ್ನು ನಮೂದಿಸಿ, ಮುಂದಿನ PARAGRAPH ನಲ್ಲಿ ಕೊಟ್ಟಿರುವ "**BOX**" ನಲ್ಲಿ TIK ಮಾಡಿದ ನಂತರ "**OTP**" ಯನ್ನು ಅಯ್ಕೆ ಮಾಡಿಕೊಂಡು "**OTP ಪಡೆಯಿರಿ**" ಕ್ಲಿಕ್ ಮಾಡಿದಾಗ, ಪ್ರಾಂಶುಪಾಲರ/ಉಪನ್ಯಾಸಕರ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಗೆ OTP ಬರುತ್ತದೆ. ಈ "**OTP ಯನ್ನು ನಮೂದಿಸಿದ**" ನಂತರ ತಮ್ಮ ನೋಂದಣಿಯ WEB PAGE ತೆರೆದುಕೊಳ್ಳುತ್ತದೆ. ಇಲ್ಲಿ ಸಂಬಂಧಿಸಿದ ಪ್ರಾಂಶುಪಾಲರ ಅಥವಾ ಉಪನ್ಯಾಸಕರ ಎಲ್ಲಾ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸುವುದು.

2. ನಮೂದಿಸುವಾಗ ತಾಂತ್ರಿಕ ತೊಂದರೆಯಾಗಿ ಮತ್ತೊಮ್ಮೆ ಪ್ರಯತ್ನಿಸುವಾಗ **"THIS AADHAR E-KYC ALREADY DONE"** ಎಂದು ಬಂದರೆ, **24 ಗಂಟೆಗಳ ನಂತರ** (ರಜೆ ದಿನಗಳನ್ನು ಹೊರತುಪಡಿಸಿ) ನೋಂದಾಯಿಸಲು ಪ್ರಯತ್ನಿಸುವುದು.
3. **ಆಧಾರ್ ಸಂಖ್ಯೆಯು ಬ್ಯಾಂಕ್** ಖಾತೆಗೆ SEEDING **ಆಗಿರುವುದನ್ನು** ಖಾತ್ರಿಪಡಿಸಿಕೊಂಡ ನಂತರ ಅದೇ **ಬ್ಯಾಂಕ್** ಖಾತೆಯ ಸಂಖ್ಯೆಯನ್ನು ನಮೂದಿಸುವುದು. **ಸಂಭಾವನೆ ಪಾವತಿ ಸಮಯದಲ್ಲಿ** ಸದರಿ ಮಾಹಿತಿಯನ್ನು **ಬಳಸಿಕೊಳ್ಳಲಾಗುವುದು**. ಆದ್ದರಿಂದ ಈ ಮಾಹಿತಿಯನ್ನು ಕರಾರುವಕ್ಕಾಗಿ ನಮೂದಿಸಿ, ಸಂಬಂಧಪಟ್ಟ ತಾವೇ ಪರಿಶೀಲಿಸಿಕೊಳ್ಳುವುದು. ತಾವು ನೀಡಿದ ಮಾಹಿತಿಯಲ್ಲಿ ಏನಾದರೂ **ಲೋಪದೋಷಗಳಿದ್ದು, ಸಂಭಾವನೆ ಪಾವತಿಯಾಗದಿದ್ದಲ್ಲಿ ಅದಕ್ಕೆ ಮಂಡಲಿಯು ಜವಾಬ್ದಾರಿಯಾಗಿರುವುದಿಲ್ಲ.**
4. ಪ್ರಾಂಶುಪಾಲರ/ಉಪನ್ಯಾಸಕರ ಮಾಹಿತಿಯಲ್ಲಿ ಹೆಸರು, ಬೋಧಿಸುವ ವಿಷಯ, ವಿದ್ಯಾರ್ಹತೆ, ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ **(ಪ್ರೌಢಶಾಲೆಯಿಂದ ಉಪನ್ಯಾಸಕರಾಗಿ ಬಡ್ತಿ ಹೊಂದಿದ ಉಪನ್ಯಾಸಕರು, ಉಪನ್ಯಾಸಕರಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕ ನಮೂದಿಸುವುದು),** ಇತ್ಯಾದಿ ವಿವರಗಳನ್ನು ನಮೂದಿಸಿ ಪರಿಶೀಲಿಸಿದ ನಂತರ **SUBMIT** ಮಾಡುವುದು.
5. ಗರ್ಭಿಣಿ ಹಾಗೂ ಹಾಲುಣಿಸುವ ತಾಯಂದಿರು ಪರೀಕ್ಷಾ ಕರ್ತವ್ಯದಿಂದ ವಿನಾಯಿತಿ ಪಡೆಯುವ ಸಂಬಂಧ ಪ್ರಾಂಶುಪಾಲರಿಂದ **ದೃಢೀಕರಿಸಿದ ಪ್ರಮಾಣ ಪತ್ರವನ್ನು** ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು.
6. **ವಿಭಿನ್ನ ಸಾಮರ್ಥ್ಯವುಳ್ಳ (Differently abled)** ಅಥವಾ **ಮಾರಣಾಂತಿಕ ಕಾಯಿಲೆ (Terminating Illness)** ಹೊಂದಿರುವವರು ಈ ಸಂಬಂಧ **ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು** ಪಡೆದು ಅಪ್‌ಲೋಡ್ ಮಾಡುವುದು ಹಾಗೂ ತಾವುಗಳು ಪರೀಕ್ಷೆ ಕಾರ್ಯದಲ್ಲಿ ಭಾಗವಹಿಸಲು ಇಚ್ಛಿಸಿದ್ದಲ್ಲಿ ತಮ್ಮ ಸಮ್ಮತಿಯನ್ನು ಆನ್‌ಲೈನ್ ಅರ್ಜಿಯಲ್ಲಿಯೇ ನೀಡುವುದು (by selecting **"YES"**).
7. ನಿಯೋಜಿತ ಉಪನ್ಯಾಸಕರು **ತಮ್ಮ ಮೂಲ ಕಾಲೇಜಿನಲ್ಲಿ ಮಾತ್ರ ನೋಂದಾಯಿಸಿಕೊಳ್ಳುವುದು**.

   ಬೇರೆ ಕಛೇರಿಗೆ ನಿಯೋಜನೆ ಹೊಂದಿದ್ದಲ್ಲಿ ಸದರಿ ಮಾಹಿತಿಯನ್ನು ಅಪ್‌ಡೇಟ್ ಮಾಡುವುದು.
8. ಪ್ರಾಂಶುಪಾಲರ/ಉಪನ್ಯಾಸಕರ ಮಗ/ಮಗಳು ತಾವು ಬೋಧಿಸುವ ವಿಷಯದಲ್ಲಿ **2026ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ನೋಂದಾಯಿಸಿಕೊಂಡಿದ್ದಲ್ಲಿ**, ಸದರಿ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು.
9. ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕವನ್ನು ಸರಿಯಾಗಿ ನಮೂದಿಸುವುದು. ಖಾಸಗಿ ಅನುದಾನಿತ ಕಾಲೇಜಿನ ಉಪನ್ಯಾಸಕರು **ತಮ್ಮ ಹುದ್ದೆ ಸರ್ಕಾರದ ವೇತನಾನುದಾನಕ್ಕೆ (Admit to Grant-in-Aid)** ಒಳಪಟ್ಟ ದಿನಾಂಕವನ್ನು ಸೇವೆಗೆ ಸೇರಿದ ದಿನಾಂಕವನ್ನಾಗಿ ನಮೂದಿಸಬೇಕು.

10. ಅನುದಾನಿತ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ತಮ್ಮ ಹೆಸರು ಇಲಾಖೆಯಿಂದ ಅನುಮೋದನೆಯಾಗಿದ್ದರೆ **(Approved as Principal)** ಮಾತ್ರ ಪ್ರಾಂಶುಪಾಲರೆಂದು ಹುದ್ದೆ ಆಯ್ಕೆ ಮಾಡಿಕೊಂಡು ನೋಂದಾಯಿಸಿಕೊಳ್ಳುವುದು.
11. ಸರ್ಕಾರಿ/ಅನುದಾನಿತ ಕಾಲೇಜಿನ **ಪ್ರಭಾರಿ ಪ್ರಾಂಶುಪಾಲರು** ನೋಂದಾಯಿಸಿಕೊಳ್ಳುವಾಗ ಹುದ್ದೆಯನ್ನು **ಪ್ರಭಾರಿ ಪ್ರಾಂಶುಪಾಲರು** ಎಂದು **"ಆಯ್ಕೆ"** ಮಾಡಿಕೊಳ್ಳಬೇಕು.
12. ಪ್ರಾಂಶುಪಾಲರ/ಉಪನ್ಯಾಸಕರ ಮಾಹಿತಿಯನ್ನು **ಹೊಸದಾಗಿ ನಮೂದಿಸಿದಾಗ ಹೊಸ EVALUATOR REGISTRATION CODE ಸೃಜನೆಯಾಗಿ CHECKLIST ನಲ್ಲಿ ಲಭ್ಯಗೊಳ್ಳುತ್ತದೆ.** ಈ CODE ಅನ್ನು ಮುಂಬರುವ ಪ್ರಾಯೋಗಿಕ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳಲ್ಲಿ ಕಾರ್ಯನಿರ್ವಹಿಸಲು ಕಡ್ಡಾಯವಾಗಿ ಬಳಸಬೇಕಿರುತ್ತದೆ. ಆದ್ದರಿಂದ ಎಲ್ಲಾ ಪ್ರಾಂಶುಪಾಲರು/ಉಪನ್ಯಾಸಕರು ತಮ್ಮ **EVALUATOR REGISTRATION CODE** ಅನ್ನು ತಮ್ಮೊಂದಿಗೆ ಇಟ್ಟುಕೊಂಡು ಅಗತ್ಯವಿದ್ದಾಗ ಬಳಸುವುದು.
13. ರಾಜ್ಯದ ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಈಗಾಗಲೇ **PU EEDS** ನಲ್ಲಿ ನೋಂದಾಯಿಸಿರುವ ಎಲ್ಲಾ **ಉಪನ್ಯಾಸಕರ ಮಾಹಿತಿಯನ್ನು EXAM PORTAL LOGIN ನಲ್ಲಿ** ನೋಂದಾಯಿಸುವುದು ಪ್ರಾಂಶುಪಾಲರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ತಪ್ಪಿದ್ದಲ್ಲಿ ಅಂತಹ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.
14. ಸರ್ಕಾರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು SATS PORTAL ನಲ್ಲಿ ಇಂದೀಕರಿಸಿರುವ ಎಲ್ಲಾ ಉಪನ್ಯಾಸಕರ ಮಾಹಿತಿಯನ್ನು ಮೌಲ್ಯಮಾಪಕರ ನೋಂದಣಿ ತಂತ್ರಾಂಶದಲ್ಲಿ ಪ್ರಾಂಶುಪಾಲರು ಕಡ್ಡಾಯವಾಗಿ ಇಂದೀಕರಿಸಬೇಕು.
15. ಮೇಲೆ ಸೂಚಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ಕಾಲೇಜಿನ ಪ್ರಾಂಶುಪಾಲರು ಖುದ್ದಾಗಿ ತಮ್ಮ ಲಾಗಿನ್ ನಲ್ಲಿ ನಿರ್ವಹಿಸುವುದು. ನಮೂದಿಸಿರುವ ಮಾಹಿತಿಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ನೇರವಾಗಿ ಅಥವಾ ಅಂಚೆ ಮುಖಾಂತರ **"ಜಂಟಿ ನಿರ್ದೇಶಕರು, ಪಿಯು ಪರೀಕ್ಷೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003"** ಇವರಿಗೆ ಸೂಕ್ತ ದಾಖಲೆಗಳು ಮತ್ತು ಕೋರಿಕೆ ಪತ್ರದೊಂದಿಗೆ ಕೂಡಲೇ ಸಲ್ಲಿಸಿ ಸರಿಪಡಿಸಿಕೊಳ್ಳುವುದು.

ನಮೂದಿಸಿರುವ ಮಾಹಿತಿಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ. ಇದರಿಂದ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಕ್ಕೆ ನೇಮಿಸುವ ಪ್ರಕ್ರಿಯೆಯಲ್ಲಿ **ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಸದರಿ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.**

ಆನ್‌ಲೈನ್‌ನಲ್ಲಿ ಇಂದೀಕರಿಸಿದ ಮಾಹಿತಿಯ ಚೆಕ್‌ಲಿಸ್ಟ್ ಅನ್ನು **ಪ್ರಾಂಶುಪಾಲರು ದೃಢೀಕರಿಸಿ** ತಮ್ಮ ಜಿಲ್ಲಾ ಉಪನಿರ್ದೇಶಕರು, **ಶಾಲಾ ಶಿಕ್ಷಣ ಇಲಾಖೆ**, (ಪದವಿ ಪೂರ್ವ) ಇವರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.

2026ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷಾ ಕಾರ್ಯಗಳ ಸಂಬಂಧ ಎಲ್ಲಾ ಮಾಹಿತಿಗಳನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ **PU EXAM PORTAL ನಲ್ಲಿ** ಪ್ರಾಂಶುಪಾಲರು ಪಡೆಯುವುದು.

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ.

**ಸೂಕ್ತ ಕ್ರಮಕ್ಕಾಗಿ: -**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ **(ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ).**

ಪ್ರತಿಗಳನ್ನು: -

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012 ಇವರಿಗೆ ಮಾಹಿತಿಗಾಗಿ.
2. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ಇವರಿಗೆ ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ಇವರಿಗೆ ಮಾಹಿತಿಗಾಗಿ.
4. ಉಪನಿರ್ದೇಶಕರು, (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ಇವರಿಗೆ ಮಾಹಿತಿಗಾಗಿ.
5. ಹೆಚ್ಚುವರಿ/ಕಛೇರಿ ಪ್ರತಿ.